ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿ/ಲೆಪ/ಖಜಾನೆ-2/2016-17 ದಿನಾಂಕ: 16-02-2017.

## ಸುತ್ತೋಲೆ

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರೇತರ ಶುಲ್ಕಗಳ ಮರುಭರಣ ಮಾಡುವ ಕುರಿತು.

ಉಲ್ಲೇಖ: ಸರ್ಕಾರದ ಕಾರ್ಯದರ್ಶಿಗಳು, ಖಜಾನೆ-2 ರವರ ಸುತ್ತೋಲೆ ಸಂಖ್ಯೆ: ಖನಿ /ಆಶಾ3/ಖII-74/14-15, ದಿನಾಂಕ: 09-02-2017 (ಸುತ್ತೋಲೆ-51)

************

ಉಲ್ಲೇಖಿತ ಸರ್ಕಾರದ ಸುತ್ತೋಲೆಯಂತೆ, ಖಜಾನೆ-2 ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ, ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನಿರ್ವಹಣೆಯಾಗುವ ವಿವಿಧ ಲೆಕ್ಕಶೀರ್ಷಿಕೆಗಳಡಿ ಒದಗಿಸಲಾದ ಅನುದಾನವು ವ್ಯಪಗತವಾಗುವುದನ್ನು ತಡೆಯುವ ಸಲುವಾಗಿ ಪ್ರಸಕ್ತ ಸಾಲಿಗೆ ಏಕಕಾಲಿಕ ಕ್ರಮವಾಗಿ, ಈಗಾಗಲೇ ಭರಿಸಲಾದ ಈ ಕೆಳಕಂಡ ವೆಚ್ಚಗಳ ಮರುಭರಣವನ್ನು ಕಾಲೇಜುಗಳ/ಶಿಕ್ಷಣ ಸಂಸ್ಥೆಗಳ ಸರ್ಕಾರೇತರ ಖಾತೆಗೆ (ಬ್ಯಾಂಕ್ ಪಿ.ಡಿ. ಖಾತೆ) ಪಾವತಿಸಲು ಸಲುವಾಗಿ ಸದರಿ ಖಾತೆಗಳನ್ನು ಖಜಾನೆ-2ರಲ್ಲಿ ಸ್ವೀಕರ್ತರನ್ನಾಗಿ ನೊಂದಾಯಿಸಿ ಪಾವತಿಗಳನ್ನು ಮಾಡುವ ವಿಧಾನವನ್ನು ರೂಪಿಸಲಾಗಿದೆ. ಸುತ್ತೋಲೆಯನ್ನು ಇದರೊಂದಿಗೆ ಲಗತ್ತಿಸಲಾಗಿದ್ದು ಅದರಂತೆ ಕ್ರಮವಹಿಸಿ ವೆಚ್ಚಗಳ ಮರುಭರಣಕ್ಕೆ ಕ್ರಮ ಕೈಗೊಳ್ಳುವುದು.

| | | |
|---|---|---|
| 1. | ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ಉಪನ್ಯಾಸಕರಿಗೆ ನೀಡಲಾಗಿರುವ ತರಬೇತಿ ಕಾರ್ಯಕ್ರಮಗಳ ಖರ್ಚು ವೆಚ್ಚ. | 2202-02-001-0-01-059 (ಯೋಜನೆ) |
| 2. | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕ ಮರುಪಾವತಿ | 2202-02-107-3-02-103 (ಯೋಜನೆ) |
| 3. | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ದಸರಾ ರಜೆಯಲ್ಲಿ ನಡೆಸಲಾದ ವಿಶೇಷ ತರಗತಿಗಳ ಖರ್ಚು ವೆಚ್ಚ | 2202-02-108-0-01-422 (ಯೋಜನೆ) |
| 4. | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ದಸರಾ ರಜೆಯಲ್ಲಿ ನಡೆಸಲಾದ ವಿಶೇಷ ತರಗತಿಗಳ ಖರ್ಚು ವೆಚ್ಚ | 2202-02-108-0-01-423 (ಯೋಜನೆ) |

ನಿರ್ದೇಶಕರ ಪರವಾಗಿ,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

1. ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ,
2. ಎಲ್ಲಾ ಬಟವಾಡೆ ಅಧಿಕಾರಿಗಳಿಗೆ (ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ)-ಜಿಲ್ಲಾ ಉಪನಿರ್ದೇಶಕರ ಮುಖಾಂತರ.

ಪ್ರತಿ:

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, (ಖಜಾನೆ-2) ಆರ್ಥಿಕ ಇಲಾಖೆ, ಹಾಗೂ ಪದನಿಮಿತ್ತ ಖಜಾನೆ ಆಯುಕ್ತರ ಕಚೇರಿ, 7ನೇ ಮಹಡಿ, ವಾಣಿಜ್ಯ ತೆರಿಗೆ ಇಲಾಖೆಗಳ ಕಟ್ಟಡ, ಗಾಂಧಿನಗರ, ಬೆಂಗಳೂರು-ರವರಿಗೆ ಮಾಹಿತಿಗಾಗಿ,
2. ಸಹಾಯಕ ನಿರ್ದೇಶಕರು, ಇ-ಆಡಳಿತ, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ-ರವರಿಗೆ ವೆಬ್‌ಸೈಟ್‌ನಲ್ಲಿ ಹೋಸ್ಟ್ ಮಾಡಲು.
3. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ,
4. ಕಛೇರಿ ಪ್ರತಿ

ಸರ್ಕಾರದ ಕಾರ್ಯದರ್ಶಿ (ಖಜಾನೆ-2) ಆರ್ಥಿಕ ಇಲಾಖೆ ಹಾಗೂ ಪದನಿಮಿತ್ತ ಖಜಾನೆ ಆಯುಕ್ತರ ಕಚೇರಿ,
7ನೇ ಮಹಡಿ, ವಾಣಿಜ್ಯ ತೆರಿಗೆ ಇಲಾಖೆಗಳ ಕಟ್ಟಡ, ಗಾಂಧಿನಗರ, ಬೆಂಗಳೂರು-560 009.

ಸಂ: ಖ2/ಪಿ.ಎಂ.ಯು/92/2015-16 ದಿನಾಂಕ: 08.02.2017

ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಶಿಕ್ಷಣ ಇಲಾಖೆಯ ಸರ್ಕಾರೇತರ ಶುಲ್ಕಗಳ ಮರು ಭರಣ (Reimbursement) ಮಾಡುವ ಕುರಿತು.

ಉಲ್ಲೇಖ: 1. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ:ಪಪೂಶಿ/ ಲೆಪ/ಖಜಾನೆ-2/2016-17, ದಿ: 27.01.2017

********

Dir -2236

ಉಲ್ಲೇಖಿತ ಪತ್ರದಲ್ಲಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಸರ್ಕಾರದ ಆದೇಶ ಸಂಖ್ಯೆ ಇಡಿ 179 ಯೋಯೋಕ 2001, ದಿ: 17.08.2001 ಅನ್ನು ಉಲ್ಲೇಖಿಸುತ್ತಾ ಸದರಿ ಆದೇಶದಲ್ಲಿ ನಿಗದಿಪಡಿಸಿರುವಂತೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ದಾಖಲಾತಿ ಸಮಯದಲ್ಲಿ ಸರ್ಕಾರೇತರ ಶುಲ್ಕವಾದ ಕ್ರೀಡಾ ಶುಲ್ಕ, ವಿಶೇಷ ಕ್ರೀಡಾ ಶುಲ್ಕ, ವಾಚನಾಲಯ ಶುಲ್ಕ, ವಿದ್ಯಾರ್ಥಿಯ ಕ್ಷೇಮಾಭಿವೃದ್ಧಿ ನಿಧಿ, ತರಗತಿ ಪರೀಕ್ಷಾ ಶುಲ್ಕಗಳನ್ನು ಪ್ರತಿ ವಿದ್ಯಾರ್ಥಿನಿಯರುಗಳಿಂದ ಪಡೆಯದೇ ಆಯಾ ಕಾಲೇಜುಗಳಿಗೆ ನಿರ್ವಹಿಸಿರುವ ಸರ್ಕಾರೇತರ ಖಾತೆಯಿಂದ ಪಾವತಿ ಮಾಡಿ ಸದರಿ ಪಾವತಿಗಳನ್ನು ಸರ್ಕಾರದಿಂದ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಒದಗಿಸಲಾಗುವ ಅನುದಾನದಿಂದ ಸಿಟಿಎಸ್-5 ರ ಮುಖಾಂತರ ಖಜಾನೆಯಿಂದ ಸೆಳೆದು ಪ್ರಾಂಶುಪಾಲರ ವೈಯಕ್ತಿಕ ಖಾತೆಯ (ಬ್ಯಾಂಕ್ ಪಿ.ಡಿ ಖಾತೆ) ಮೂಲಕ ಆಯಾ ಕಾಲೇಜಿನ ಸರ್ಕಾರೇತರ ಖಾತೆಗೆ ಮರುಪಾವತಿ ಮಾಡುವ ವ್ಯವಸ್ಥೆ ಇರುತ್ತದೆ ಎಂದು ತಿಳಿಸಿರುತ್ತಾರೆ.

ಪ್ರಸಕ್ತ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ಕೆಲವೊಂದು ಶೈಕ್ಷಣಿಕ ಸುಧಾರಣಾ ಕಾರ್ಯಕ್ರಮಗಳ ಅವಶ್ಯಕ ಸಾದಿಲ್ವಾರು ವೆಚ್ಚಗಳ ತುರ್ತು ನಿರ್ವಹಣೆಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಸರ್ಕಾರೇತರ ಖಾತೆಗಳಿಂದ ವೆಚ್ಚ ಭರಿಸಲಾಗಿದ್ದು, ಸದರಿ ಮೊತ್ತವನ್ನು ಸರ್ಕಾರದಿಂದ ಖಜಾನೆ-2ರ ಮೂಲಕ ಸೆಳೆದು ಕಾಲೇಜಿನ ಸರ್ಕಾರೇತರ ಖಾತೆಗೆ ಮರು ಭರಿಸಲು ಸದರಿ ಖಾತೆಯನ್ನು ಖಜಾನೆ-2ರಲ್ಲಿ ಸ್ವೀಕರ್ತರನ್ನಾಗಿ ನೋಂದಾಯಿಸಲು ಅನುಮತಿ ಕೋರಿರುತ್ತಾರೆ. ಇದೇ ರೀತಿಯ ಕೋರಿಕೆಗಳು ಕಾಲೇಜು ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆಗಳಿಂದ ಸ್ವೀಕೃತವಾಗಿವೆ.

ಪ್ರಸಕ್ತ ಸಾಲಿನ ಅನುದಾನವು ವ್ಯಪಗತವಾಗುವುದನ್ನು ತಡೆಯುವ ಉದ್ದೇಶದಿಂದ ಏಕಕಾಲಿಕ ಕ್ರಮವಾಗಿ ಇಂತಹ ವೆಚ್ಚಗಳ ಮರುಭರಣ (Reimbursement) ವನ್ನು ಕಾಲೇಜುಗಳ/ಶಿಕ್ಷಣ ಸಂಸ್ಥೆಗಳ ಸರ್ಕಾರೇತರ ಖಾತೆಗೆ (ಬ್ಯಾಂಕ್ ಪಿ.ಡಿ.ಖಾತೆ) ಪಾವತಿಸುವ ಉದ್ದೇಶದಿಂದ ಸದರಿ ಖಾತೆಗಳನ್ನು ಖಜಾನೆ-2 ರಲ್ಲಿ ಸ್ವೀಕರ್ತರನ್ನಾಗಿ ನೋಂದಾಯಿಸಿ ಪಾವತಿಗಳನ್ನು ಮಾಡುವ ವಿಧಾನವೊಂದನ್ನು ರೂಪಿಸಿದ್ದು, (ಅನುಬಂಧವನ್ನು ಲಗತ್ತಿಸಿದೆ) ಅದರಂತೆ ವೆಚ್ಚಗಳ ಮರುಭರಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಮುಂದಿನ ಸಾಲುಗಳಲ್ಲಿ ಈ ವೆಚ್ಚಗಳನ್ನು ಖಜಾನೆ-2ರಲ್ಲಿ ಯಾವ ರೀತಿ ಪಾವತಿಸಬೇಕು ಎಂಬುದರ ಕುರಿತು ಸರ್ಕಾರದ ಮಾರ್ಗದರ್ಶನ ಕೋರಿದೆ.

ತಮ್ಮ ನಂಬುಗೆಯ,

ಸರ್ಕಾರದ ಕಾರ್ಯದರ್ಶಿಗಳು (ಖಜಾನೆ-2)
ಹಾಗೂ ಪದನಿಮಿತ್ತ ಖಜಾನೆ ಆಯುಕ್ತರು.

*ಪ್ರತಿಯನ್ನು:*

1. ಕಾರ್ಯದರ್ಶಿಗಳು, ಆಯವ್ಯಯ ಮತ್ತು ಸಂಪನ್ಮೂಲ, ಆರ್ಥಿಕ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು - 01
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು-12.

**ಅನುಬಂಧ**

**(ಸುತ್ತೋಲೆ ಸಂಖ್ಯೆ:ಖನಿ/ಆಶಾ3/ಖII-74/14-15 ದಿನಾಂಕ: 09.02.2017 (ಸುತ್ತೋಲೆ- 51))**

**ಶಿಕ್ಷಣ ಇಲಾಖೆಯ (ಕಾಲೇಜು ಶಿಕ್ಷಣ, ಪದವಿ ಪೂರ್ವ ಶಿಕ್ಷಣ, ಶಾಲೆಗಳು) ಶುಲ್ಕ ವೆಚ್ಚ ಮರುಭರಣದ (Fees Reimbursement) ಇತ್ಯಾದಿ ಕ್ಲೇಂಗಳನ್ನು ಖಜಾನೆ-2ರಲ್ಲಿ ಪಾವತಿಸುವ ವಿಧಾನ**

*I. ಡಿಡಿಓ ಚಟುವಟಿಕೆಗಳು :-*

1. ಶಿಕ್ಷಣ ಇಲಾಖೆಯಲ್ಲಿನ ಶೈಕ್ಷಣಿಕ ಸುಧಾರಣಾ ಕಾರ್ಯಕ್ರಮಗಳ ಅವಶ್ಯಕ ಸಾದಿಲ್ವಾರು ವೆಚ್ಚಗಳ ತುರ್ತು ನಿರ್ವಹಣೆಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು/ಶಿಕ್ಷಣ ಸಂಸ್ಥೆಗಳು ಸರ್ಕಾರೇತರ ಖಾತೆಗಳಿಂದ ವೆಚ್ಚ ಭರಿಸಿ, ಸದರಿ ವೆಚ್ಚವನ್ನು ಮೊತ್ತವನ್ನು ಸರ್ಕಾರದಿಂದ ಖಜಾನೆ-2ರ ಮೂಲಕ ಸೆಳೆಯಲು ಆಯಾ ಸಂಸ್ಥೆಗಳ ಮುಖ್ಯಸ್ಥರು (ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು) ಖಜಾನೆ-2ರಲ್ಲಿ ಸಾದಿಲ್ವಾರು ಬಿಲ್ಲು ಸಿ.ಟಿ.ಎಸ್-5 ಅನ್ನು ಸೃಜಿಸಿ, ಆನ್ ಲೈನ್ ಮೂಲಕ ಖಜಾನೆಗಳಿಗೆ ಸಲ್ಲಿಸಬೇಕು.

2. ಬಿಲ್ಲಿನ ವಿವರಗಳು ಕೆಳಕಂಡಂತಿರುತ್ತವೆ.

   1) ಸ್ವೀಕರ್ತರು (Recipient) : ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳು

   2) ಸ್ವೀಕರ್ತರ ವಿಧ :

| Recipient | Recipient Type Code | Recipient Type |
|---|---|---|
| Educational Institution (Schools) | 13 | Schools |
| Educational Institution (Colleges) | 14 | Other Education Institutions |

   3) ಲೆಕ್ಕ ಶೀರ್ಷಿಕೆ :

| | |
|---|---|
| ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನೀಯರ ಸರ್ಕಾರೇತರ ಶುಲ್ಕ ಮರು ಪಾವತಿ | 2202-02-107-3-02-103(P) |
| ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ದಸರಾ ರಜೆಯಲ್ಲಿ ನಡೆಸಲಾದ ವಿಶೇಷ ತರಗತಿಗಳ ಖರ್ಚು ವೆಚ್ಚ | 2202-02-108-0-01-422(P) |
| ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ದಸರಾ ರಜೆಯಲ್ಲಿ ನಡೆಸಲಾದ ವಿಶೇಷ ತರಗತಿಗಳ ಖರ್ಚು ವೆಚ್ಚ | 2202-02-108-0-01-423(P) |
| ಆರ್.ಟಿ.ಇ. ಅಡಿಯ ಖಾಸಗಿ ಶಾಲೆಗಳ ಶುಲ್ಕಗಳ ಮರುಪಾವತಿ-ಇತರೆ ಖರ್ಚುಗಳು | 2202-01-102-0-05-059(P) |
| ಆರ್.ಟಿ.ಇ. ಅಡಿಯ ಖಾಸಗಿ ಶಾಲೆಗಳ ಶುಲ್ಕಗಳ ಮರುಪಾವತಿ-ಪರಿಶಿಷ್ಟ ಜಾತಿ ಉಪಯೋಜನೆ | 2202-01-102-0-05-422(P) |
| ಆರ್.ಟಿ.ಇ. ಅಡಿಯ ಖಾಸಗಿ ಶಾಲೆಗಳ ಶುಲ್ಕಗಳ ಮರುಪಾವತಿ - ಗಿರಿಜನ ಉಪಯೋಜನೆ | 2202-01-102-0-05-423(P) |

1) ಬಿಲ್ ಕ್ಲೇಂ ವಿಧ : DC Bill - Fees Reimbursement,

2) ಈ ಬಿಲ್ಲುಗಳಿಗೆ ಮೇಲು ಸಹಿಯ ಅಗತ್ಯವಿರುವುದಿಲ್ಲ.

3) ಬಿಲ್ಲುಗಳೊಂದಿಗೆ ಸಕ್ಷಮ ಪ್ರಾಧಿಕಾರದ ಮಂಜೂರಾತಿ ಆದೇಶ ಲಗತ್ತಿಸಬೇಕು.

4) ಸ್ವೀಕರ್ತರಿಂದ ಪಡೆದ ಮುಂಗಡ ರಸೀದಿಯನ್ನು ಅಂಗೀಕರಿಸಿ ಸೂಕ್ತವಾಗಿ ರದ್ದುಪಡಿಸಿರಬೇಕು. (Accepted and canceled)

*II.* ***ಖಜಾನೆ ಚಟುವಟಿಕೆಗಳು :-***

1. ಮೇಲ್ಕಂಡಂತೆ ಸಲ್ಲಿಸಲ್ಪಡುವ ಬಿಲ್ಲುಗಳನ್ನು ಖಜಾನಾಧಿಕಾರಿಗಳು ಖಜಾನೆ-2ರಲ್ಲಿ ಸಂಸ್ಕರಿಸಬೇಕು.

2. ಬಿಲ್ಲುಗಳಿಗೆ ಇತರೆ ಸಾಮಾನ್ಯ ಖಜಾನೆ ಪರಿಶೀಲನೆಗಳೊಂದಿಗೆ ನಿರ್ದಿಷ್ಟ ಮೌಲ್ಯಾಂಶಗಳು ಕೆಳಕಂಡಂತಿರುತ್ತವೆ :

1) ಆನ್ ಲೈನ್ ಮೂಲಕ ಸಲ್ಲಿಸಲಾದ ಬಿಲ್ಲಿನ ಮುದ್ರಿತ ಪ್ರತಿಯಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

(Bill shall be print out of the electronic bill submitted online to the treasury - Note 2 Article 24(b) KFC).

2) ಬಿಲ್ಲಿನ ಮೇಲೆ ಹಿಂಬರಹ ದಾಖಲಿಸಿರಬೇಕು.

(The drawing officer is required to record discharge on the bill with the words 'contents received' under his seal and signature - Note 1 Art.24 KFC).

3) ಸಕ್ಷಮ ಪ್ರಾಧಿಕಾರಿಗಳ ಮಂಜೂರಾತಿ ಆದೇಶ ಪರಿಶೀಲಿಸಬೇಕು.

(Expenditure must have been sanctioned by a general or special order of authorities competent to sanction expenditure - Art. 14(a) of KFC read with G.O. No. FD 07 TAR 97 dt.16.10.98).

4) ಸ್ವೀಕರ್ತನ ಮುಂಗಡ ರಸೀತಿಯನ್ನು ಪರಿಶೀಲಿಸಬೇಕು.

(A pre-receipt with a proper acknowledgement of the payment with all the necessary particulars from the recipient to be enclosed to the bill - Art. 50 of KFC).

5) ಖಜಾನೆ ಸಾಮಾನ್ಯ ಪರಿಶೀಲನೆಗೆ ಒಳಪಟ್ಟಂತೆ ಬಿಲ್ಲನ್ನು ಸಂಸ್ಕರಿಸಿ ಇ-ಪಾವತಿ ಮೂಲಕ ಸ್ವೀಕರ್ತನ ಖಾತೆಗೆ ಪಾವತಿಸಬೇಕು.